# ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು.

ಶಾಸನಬದ್ಧ ಸಹಕಾರಿ ಸಂಸ್ಥೆ

ಸೌಹಾರ್ದ ಸಹಕಾರಿ ಸೌಧ, ನಂ.68, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ,
ಬೆಂಗಳೂರು-560055, Ph : 080-23378375-80, website : www.souharda.coop
Email : souharda@souharda.coop


**ಸಂಖ್ಯೆ: ಸಂ.ಸ/ಸಿಬ್ಬಂದಿ/ಗುನೇ/01/2026-27** **ದಿನಾಂಕ: 04.04.2026**

## ಪ್ರಕಟಣೆ

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ಈ ಸಂಸ್ಥೆಗೆ ಅಗತ್ಯ ಇರುವ ಕಾನೂನು ಅಧಿಕಾರಿ ಹುದ್ದೆಗೆ ಗುತ್ತಿಗೆ ಆಧಾರದಲ್ಲಿ ತಾತ್ಕಾಲಿಕ ನೇಮಕಾತಿಯನ್ನು ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ-1997 ಮತ್ತು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ ಇದರ ಉಪವಿಧಿ ಹಾಗೂ ಸಿಬ್ಬಂದಿ ಸೇವಾ ನಿಯಮಾವಳಿಯ ನೇಮಕಾತಿ ನಿಯಮ ಹಾಗೂ ಆಡಳಿತ ಮಂಡಲಿ ಮತ್ತು ಸಿಬ್ಬಂದಿ ನೇಮಕಾತಿ ಸಮಿತಿಯ ನಿರ್ಣಯದಂತೆ ನೇಮಕ ಮಾಡಿಕೊಳ್ಳಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ದಿನಾಂಕ 24.02.2026 ರ ಆಡಳಿತ ಮಂಡಳಿ ಸಭೆಯು ಅನುಮೋದಿಸಿದಂತೆ ಗುತ್ತಿಗೆ ಆಧಾರದ ನೇಮಕಾತಿಗೆ ಪರಿಗಣಿಸಲಾದ ಹುದ್ದೆಗಳು ಮತ್ತು ವಿದ್ಯಾರ್ಹತೆ ವಿವರ ಕೆಳಗಿನಂತಿದೆ.

| ಕ್ರ.ಸಂ | ಹುದ್ದೆಗಳ ಹೆಸರು | ಹುದ್ದೆಗಳ ಸಂಖ್ಯೆ | ವಿದ್ಯಾರ್ಹತೆ |
|---|---|---|---|
| 1 | ಕಾನೂನು ಅಧಿಕಾರಿ | 03 | ಅಂಗೀಕೃತ ವಿಶ್ವವಿದ್ಯಾಲಯದಿಂದ ಕಾನೂನು ಪದವಿ ಕಡ್ಡಾಯ.ಕಂಪ್ಯೂಟರ್ ಪರಿಣಿತಿ ಕಡ್ಡಾಯ. ಬ್ಯಾಂಕಿಂಗ್ ಅಥವಾ ಸಹಕಾರ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುತ್ತಿರುವವರಿಗೆ ಹಾಗೂ ಅನುಭವ ಹೊಂದಿದವರಿಗೆ ಆದ್ಯತೆ. ಸದರಿ ಹುದ್ದೆಗೆ ಗರಿಷ್ಠ ವಯೋಮಿತಿ 35 ವರ್ಷಗಳು |

**ವಿಶೇಷ ಗಮನಕ್ಕಾಗಿ:**

1. ಈ ಮೇಲಿನ ಹುದ್ದೆಗೆ ಕನ್ನಡ ಮತ್ತು ಆಂಗ್ಲ ಭಾಷೆಗಳು ಓದಲು, ಬರೆಯಲು, ಅರ್ಥೈಸಿಕೊಳ್ಳಲು ಮತ್ತು ಮಾತನಾಡಲು ಅಗತ್ಯ ಜ್ಞಾನ ಹೊಂದಿರಬೇಕು.
2. **ಅರ್ಜಿ ಶುಲ್ಕ:** ಶುಲ್ಕ ರೂ.500/- ಅನ್ನು "ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., (Karnataka State Souharda Federal Cooerative Ltd.,) ಈ ಹೆಸರಿನಲ್ಲಿ ಬೆಂಗಳೂರಿನಲ್ಲಿ ಸಂದಾಯವಾಗುವಂತೆ ಡಿ.ಡಿ (ಡಿಮ್ಯಾಂಡ್ ಡ್ರಾಫ್ಟ್) ತೆಗೆದು, ಅರ್ಜಿಯ ಜೊತೆ ಲಗತ್ತಿಸಿ ಕಳುಹಿಸುವುದು.
3. ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯಲ್ಲಿ ಅಗತ್ಯವಿರುವ ಈ ಮೇಲಿನ ಗುತ್ತಿಗೆ ಆಧಾರದ ಹುದ್ದೆಗೆ ಅರ್ಜಿ ಸಲ್ಲಿಸುವ ಸಂಬಂಧ ನೇಮಕಾತಿ ಪ್ರಕ್ರಿಯೆಯ ಪೂರ್ಣ ವಿವರ ಹಾಗೂ ನಿಗದಿತ ಅರ್ಜಿಗಳನ್ನು ಸಂಯುಕ್ತ ಸಕಕಾರಿಯ ಜಾಲ ತಾಣ website:www.souharda.coop ರಲ್ಲಿ ನೀಡಿದ್ದು, ಕೊರಿಯರ್/ರಿಜಿಸ್ಟರ್ ಪೋಸ್ಟ್/ಖುದ್ದಾಗಿ ಕಛೇರಿಗೆ ತಲುಪಿಸುವ ಮೂಲಕ ಅರ್ಜಿ ಸಲ್ಲಿಸತಕ್ಕದ್ದು.

**1. ಅರ್ಜಿ ಸಲ್ಲಿಸುವ ವಿಧಾನ:**

**ಆಫ್‌ಲೈನ್ ಅರ್ಜಿ ಸಲ್ಲಿಕೆ:** ಅರ್ಹ ಅಭ್ಯರ್ಥಿಗಳು ನಿಗದಿತ ಅರ್ಜಿ ನಮೂನೆಯು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ವೆಬ್‌ಸೈಟ್ (www.souharda.coop) ನಿಂದ ಡೌನ್‌ಲೋಡ್ ಮಾಡಿಕೊಂಡು, ಭರ್ತಿ ಮಾಡಿ –**"ಸೌಹಾರ್ದ ಸಹಕಾರಿ ಸೌದ"** # **68, ಒಂದನೇ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸ ರಸ್ತೆ ಮಲ್ಲೇಶ್ವರಂ, ಬೆಂಗಳೂರು–560055**. ಇಲ್ಲಿಗೆ ತಲುಪುವಂತೆ ಅರ್ಜಿಗಳನ್ನು ದಿನಾಂಕ: **05.05.2026** ಸಾಯಂಕಾಲ **05:30** ರ ಒಳಗಾಗಿ ಅರ್ಜಿ ಶುಲ್ಕದ ಡಿ.ಡಿ.ಯೊಂದಿಗೆ ಅಂಚೆ/ಕೋರಿಯರ್/ಖುದ್ದಾಗಿ ತಲುಪಿಸತಕ್ಕದ್ದು.

**ಅರ್ಜಿಯಲ್ಲಿ ನಮೂದಿಸುವ ಇ–ಮೇಲ್ ವಿಳಾಸ ಹಾಗೂ ಮೊಬೈಲ್ ಸಂಖ್ಯೆ (whatsapp)ಯನ್ನು,** ನೇಮಕಾತಿ ಪ್ರಕ್ರಿಯೆಯ ಸಂವಹನಕ್ಕೆ ಪರಿಗಣಿಸಲಾಗುವುದು.

ಅಧಿಸೂಚನೆಯಲ್ಲಿ ನೀಡಿರುವ ಸೂಚನೆಗಳನ್ವಯವೇ ಅರ್ಜಿಯನ್ನು ಪೂರ್ತಿಯಾಗಿ ಭರ್ತಿ ಮಾಡತಕ್ಕದ್ದು, ಅಪೂರ್ಣ ಹಾಗೂ ತಪ್ಪು ಮಾಹಿತಿಗಳನ್ನೊಳಗೊಂಡ ಅಥವಾ ನಿಗದಿತ ಸಮಯದ ನಂತರ ತಲುಪಿದ ಅರ್ಜಿಗಳನ್ನು ಕಾರಣ ನೀಡದೆ ತಿರಸ್ಕರಿಸಲಾಗುವುದು.

**2. ಅರ್ಜಿಯ ಜೊತೆ ಸಲ್ಲಿಸಬೇಕಾದ ದಾಖಲಾತಿಗಳು:**

1. ಸೂಕ್ತವಾಗಿ ಪೂರ್ಣ ಪ್ರಮಾಣದಲ್ಲಿ ಭರ್ತಿ ಮಾಡಿದ ಹಾಗೂ ಅಭ್ಯರ್ಥಿಯ ಸಹಿಯನ್ನು ಹೊಂದಿರುವ ಅರ್ಜಿ.
2. ಹುದ್ದೆಗೆ ನಿಗದಿಪಡಿಸಿದ ಅರ್ಜಿ ಶುಲ್ಕದ ಡಿ.ಡಿ.
3. ಹುದ್ದೆಗಳಿಗೆ ನಿಗದಿಪಡಿಸಲಾದ ವಿದ್ಯಾರ್ಹತೆಯನ್ನು ರುಜುವಾತು ಪಡಿಸುವ ದಾಖಲಾತಿಗಳ ಸ್ವಯಂ ದೃಢೀಕೃತ ಪ್ರತಿಗಳು. (ಎಲ್ಲಾ ವರ್ಷಗಳ/ಸೆಮಿಸ್ಟರ್‌ಗಳ ಅಂಕಪಟ್ಟಿಗಳು)
4. ಈಗಾಗಲೇ ಸೇವೆಯಲ್ಲಿದ್ದಲ್ಲಿ, ತಾವು ಸೇವೆ ಸಲ್ಲಿಸುತ್ತಿರುವ ಪ್ರಾಧಿಕಾರ/ಸಂಸ್ಥೆಯಿಂದ ಅರ್ಜಿ ಸಲ್ಲಿಕೆಗೆ ಅನುಮತಿ ಪತ್ರ. (ಮಾದರಿ ನೀಡಲಾಗಿದೆ)
5. ಕಂಪ್ಯೂಟರ್ ಜ್ಞಾನವನ್ನು ಹೊಂದಿರುವ ಕುರಿತು ಸ್ವಯಂ ದೃಢೀಕರಿಸಿದ ದಾಖಲಾತಿ.

**3 .ಅವಧಿ :**

- ಅರ್ಜಿಸಲ್ಲಿಸಲು ಪ್ರಾರಂಭ ದಿನಾಂಕ: **06.04.2026**
- ಅರ್ಜಿಸಲ್ಲಿಸಲು ಕೊನೆಯ ದಿನಾಂಕ: **05.05.2026**

**4. ಆಯ್ಕೆ ವಿಧಾನ:**

- ಆಯ್ಕೆಯನ್ನು ಸಂಯುಕ್ತ ಸಹಕಾರಿ ಸಿಬ್ಬಂದಿ ಸೇವಾ ನಿಯಮಾವಳಿಯಂತೆ ಸಂದರ್ಶನದ ಮೂಲಕ ಮಾಡಲಾಗುತ್ತದೆ.
- ಸಂದರ್ಶನಕ್ಕೆ ಕರೆಯಲ್ಪಟ್ಟ ಅಭ್ಯರ್ಥಿಗಳು ತಮ್ಮ ಸ್ವಂತ ವೆಚ್ಚದಲ್ಲಿ ಹಾಜರಾಗಬೇಕು. ಯಾವುದೇ ಪ್ರಯಾಣ ಭತ್ಯೆ/ದಿನಭತ್ಯೆಗಳನ್ನು ನೀಡಲಾಗುವುದಿಲ್ಲ.
- ಈ ಮೇಲಿನ ಹುದ್ದೆಗೆ ಸಂದರ್ಶನ ಬೆಂಗಳೂರಿನಲ್ಲಿ ನಡೆಯಲಿದೆ.

**5. ಸಾಮಾನ್ಯ ಸೇವಾ ಷರತ್ತುಗಳು:**

1. ಸಂಯುಕ್ತ ಸಹಕಾರಿಯ ಸೇವೆಗೆ ಆಯ್ಕೆಯಾದ ಅಭ್ಯರ್ಥಿಯು 11 ತಿಂಗಳ ಅವಧಿಯ ಗುತ್ತಿಗೆ ಸೇವಾ ಅವಧಿಯನ್ನು ಹೊಂದಿರುತ್ತಾರೆ.
2. ಅನುಭವ ಮತ್ತು ವಿದ್ಯಾರ್ಹತೆಗಳನ್ನು ಆಧಾರಿಸಿ ಸಂಯುಕ್ತ ಸಹಕಾರಿಯ ನಿಯಮಗಳನ್ವಯ ವೇತನವನ್ನು ನಿಗದಿಪಡಿಸಲಾಗುವುದು.
3. ವಿದ್ಯಾರ್ಹತೆ ಹಾಗೂ ಅನುಭವಕ್ಕೆ ಸಂಬಂಧಪಟ್ಟ ಮೂಲ ದಾಖಲಾತಿಗಳನ್ನು ಸಂದರ್ಶನದ ಸಮಯದಲ್ಲಿ ಹಾಜರುಪಡಿಸತಕ್ಕದ್ದು.
4. ಸಂಯುಕ್ತ ಸಹಕಾರಿಯು ಯಾವುದೇ ಅರ್ಜಿಯನ್ನು ಕಾರಣವನ್ನು ನೀಡದೆ ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತದೆ.
5. ಆಯ್ಕೆಯಾದ ಅಭ್ಯರ್ಥಿಗಳು ಸಂಯುಕ್ತ ಸಹಕಾರಿಯ ಸೇವಾ ನಿಯಮಗಳಿಗೆ ಒಳಪಟ್ಟಿರುತ್ತಾರೆ. ಹಾಗೂ ಸಂಯುಕ್ತ ಸಹಕಾರಿಯು ಪ್ರತ್ಯೇಕ ಸೇವಾ ಷರತ್ತುಗಳನ್ನು ವಿಧಿಸುವ ಅಧಿಕಾರವನ್ನು ಹೊಂದಿರುತ್ತದೆ.
6. ಆಯ್ಕೆಯಾದ ಅಭ್ಯರ್ಥಿಗಳು ಮೂಲ ಅಂಕಪಟ್ಟಿಗಳನ್ನು ಹಾಗೂ ರೂ. 50,000/– ಸುರಕ್ಷಾ ಠೇವಣಿಯನ್ನು ನೀಡಿ ಸೇವೆಗೆ ಹಾಜರಾಗಬೇಕು. ಸೇವೆಯಿಂದ ಬಿಡುಗಡೆ ಸಂದರ್ಭದಲ್ಲಿ ಇವನ್ನು ಹಿಂದಿರುಗಿಸಲಾಗುವುದು.
7. ನೇಮಕಾತಿಗೆ ಸಂಬಂಧಿಸಿದ ಇನ್ನಿತರ ಯಾವುದೇ ಮಾಹಿತಿಯನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ವೆಬ್‌ಸೈಟ್/ಕೇಂದ್ರ ಕಛೇರಿಯನ್ನು ಸಂಪರ್ಕಿಸಿ ಪಡೆಯಬಹುದು.

6. **ಸಾಮಾನ್ಯ ಅರ್ಹತಾ ಷರತ್ತುಗಳು:–**

1. ಭಾರತೀಯ ನಾಗರೀಕನಾಗಿರತಕ್ಕದ್ದು.
2. ಅರ್ಜಿ ಸಲ್ಲಿಸಲು ಅಂತಿಮ ದಿನಾಂಕದಂತೆ ಕನಿಷ್ಠ 18 ವರ್ಷ ವಯಸ್ಸಿನವನಾಗಿರತಕ್ಕದ್ದು ಮತ್ತು ಗರಿಷ್ಠ ವಯೋಮಿತಿ 35 ವಯಸ್ಸಿನವನಾಗಿರತಕ್ಕದ್ದು.
3. ಅಭ್ಯರ್ಥಿಯು ಮಾನಸಿಕವಾಗಿ ಮತ್ತು ದೈಹಿಕವಾಗಿ ಆರೋಗ್ಯವಂತನಾಗಿರತಕ್ಕದ್ದು ಮತ್ತು ಅವರ ನೇಮಕಾತಿಯ ಹುದ್ದೆಯ ಕರ್ತವ್ಯಗಳ ದಕ್ಷ ನಿರ್ವಹಣೆಗೆ ಆತಂಕವನ್ನುಂಟು ಮಾಡುವ ಸಂಭವವಿರುವ ಯಾವುದೇ ದೈಹಿಕ ನ್ಯೂನತೆಯಿಂದ ಮುಕ್ತನಾಗಿರತಕ್ಕದ್ದು.
4. ನಿಗದಿತ ಶೈಕ್ಷಣಿಕ ಅರ್ಹತೆಯ ಜೊತೆಗೆ ಈ ಮೇಲ್ಕಂಡ ಅರ್ಹತೆಗಳನ್ನು ಹೊಂದಿರುವ ಅಭ್ಯರ್ಥಿಗಳು ನೇಮಕಾತಿಗಾಗಿ ಅರ್ಜಿ ಸಲ್ಲಿಸಲು ಅರ್ಹತೆಯನ್ನು ಹೊಂದಿರುತ್ತಾರೆ.

ಸಹಿ/–

ವ್ಯವಸ್ಥಾಪಕ ನಿರ್ದೇಶಕ

ಮತ್ತು ಸದಸ್ಯ ಕಾರ್ಯದರ್ಶಿ, ಸಿಬ್ಬಂದಿ ನೇಮಕಾತಿ ಸಮಿತಿ

**ಪ್ರಸ್ತುತವಾಗಿ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ಅಭ್ಯರ್ಥಿಗಳು ನೇಮಕಾತಿ ಪ್ರಾಧಿಕಾರಿಗಳಿಂದ ಪಡೆಯಬೇಕಾದ ನಿರಾಕ್ಷೇಪಣಾ/ಅನುಮತಿ ಪತ್ರದ ನಮೂನೆ**

ನಿರಾಕ್ಷೇಪಣಾ/ಅನುಮತಿ ಪತ್ರದ ನಮೂನೆ ಸಂಖ್ಯೆ: ದಿನಾಂಕ:

ಶ್ರೀ/ಶ್ರೀಮತಿ ------------------------- ತಂದೆ-------------- ಇವರು ---------ದಿನಾಂಕ ದಿಂದ ---------- ದಿನಾಂಕದವರೆಗೆ ------------------ಸಂಸ್ಥೆಯಲ್ಲಿ------------------ಹುದ್ದೆಯಲ್ಲಿ ಖಾಯಂ/ಹಂಗಾಮಿಯಾಗಿ ಕಾರ್ಯನಿರ್ವಹಿಸುತ್ತಿದ್ದು, ಸದರಿಯವರು ಕ.ರಾ.ಸೌ.ಸಂ.ಸನಿ., ಇದರ ನೇಮಕಾತಿ ಅಧಿಸೂಚನೆಯಂತೆ ಆಹ್ವಾನಿಸಿರುವ----------------ಹುದ್ದೆಗೆ ಅರ್ಜಿ ಸಲ್ಲಿಸಲು ಈ ಸಂಸ್ಥೆ/ಇಲಾಖೆಯಿಂದ ಯಾವುದೇ ಆಕ್ಷೇಪಣೆ ಇರುವುದಿಲ್ಲ.

ಪ್ರಾಧಿಕಾರಿಗಳ ಪದನಾಮ, ಸಹಿ &ಮೊಹರು